# 4

# ಕುಟುಂಬವನ್ನು ಸಂರಕ್ಷಿಸಿದ ಮನುಷ್ಯನು

## (2 ಅರಸು 4:1-7)

ಹಿಂದಿನ ಪಾಠದಲ್ಲಿ, ಎಲೀಷನ ಸಾರ್ವಜನಿಕವಾದ ಅದ್ಭುತವಾದಂತಹ ಮೂರು ಸೇನೆಯನ್ನು ರಕ್ಷಿಸಿದಂತಹದನ್ನು ನೋಡಿದೆವು. ಈ ಅಧ್ಯಯನದಲ್ಲಿ, ಎಲೀಷನು ಆಡಂಬರವಿಲ್ಲದೆ ಒಂದು ಮನೆಯನ್ನು ಹೇಗೆ ರಕ್ಷಿಸಿದನು ಎಂಬ ಖಾಸಗೀಯವಾದ ಅದ್ಭುತನ್ನು ನಾವು ನೋಡುತ್ತೇವೆ. ಆ ದೃಷ್ಯಾವಳಿಗಳು ಅಂತರಾಷ್ಟ್ರೀಯ ನ್ಯಾಯಸ್ಥಾನದಿಂದ ವೈಯಕ್ತಿಕ ಕುಟುಂಬಕ್ಕೆ ಬದಲಾಯಿತು. ಆದ್ದರಿಂದ ನಂತರದ ಅದ್ಭುತಗಳು ಮುಂಚಿನವುಗಳಿಗಿಂತ ಕಡಿಮೆ ಮಹತ್ವವುಳ್ಳವುಗಳಾಗಿದ್ದವೆಂದು ನಾವು ನೋಡುತ್ತೇವೆಯೋ? ಹಾಗೇನಿಲ್ಲ! ರಾಷ್ಟ್ರಗಳಲ್ಲಿ ಅದಂರತೆಯೇ ಕುಟುಂಬದಲ್ಲಿಯೂ ಆಯಿತು ಎಂದು ಅದು ಹೇಳಲ್ಪಟ್ಟಿದೆ. ಮನೆಗಳು ಯಾವುದನ್ನು ಬಲಪಡಿಸುತ್ತವೆಯೋ, ಅದು ರಾಷ್ಟ್ರಗಳನ್ನು ಬಲಪಡಿಸುವುದಾಗಿದೆ, ಮತ್ತು ಯಾವುದು ರಾಷ್ಟ್ರವನ್ನು ಬಲಪಡಿಸುವದೋ ಅದು ಜಗತ್ತನ್ನು ಬಲಪಡಿಸುವುದಾಗಿದೆ.

ಕುಟುಂಬಕ್ಕೆ ಸಹಾಯಮಾಡುವಲ್ಲಿ, ಎಲೀಷನು ತನ್ನ ಪೂರ್ವಾಧಿಕಾರಿಯಾದ ಎಲೀಯನ ಹೆಜ್ಜೆಜಾಡಿಯಲ್ಲಿ ನಡೆದನು (1 ಅರಸು 17:8-24). ದೇವರು ಕುಟುಂಬಗಳ ಬಗೆಗೆ ಕಾಳಜಿಯುಳ್ಳವನಾಗಿದ್ದನು ಮತ್ತು ನಾವೂ ಕೂಡ ಕಾಳಜಿಯುಳ್ಳವರಾಗಿರಬೇಕು! ಪಾಠವು ಮುಗಿಯುವ ಮುನ್ನ, ನಾವು ಇಂದು ತೊಂದರೆಗೊಳಗಾದ ಕುಟುಂಬಗಳಿಗೆ ಸಹಾಯ ಮಾಡುವುದು ಹೇಗೆ ಎಂಬುದರ ಬಗೆಗೆ ಚರ್ಚಿಸುವಾ.

## ಆಶಾಕಿರಣವಿಲ್ಲದ ಕುಟುಂಬ (4:1-7)

**ಹೃದಯ ಒಡೆದುಹೋಗುವಂತಹದು**

ಕಥೆಯು ತೆರೆಯುತ್ತಿದ್ದಂತೆಯೇ, ಎಲೀಷನು ಇಸ್ರಾಯೇಲಿಗೆ ಮರಳಿದನು. ಬಹುಶಃ ಆತನು ಇದ್ದಂತಹ ಪಟ್ಟಣವು ಪ್ರವಾದಿಮಂಡಲಿಯು ಇರುವಂತಹ ಸ್ಥಳವಾದ ಬೇತೇಲು, ಯೆರಿಕೋ, ಅಥವಾ ಗಿಲ್ಗಾಲು ಆಗಿರಬೇಕು (2 ಅರಸು 2:3, 5; 4:38). ಆತನು ಅಲ್ಲಿರುವಾಗ, "ಒಂದು ದಿವಸ ಪ್ರವಾದಿಮಂಡಲಿಯವರಲ್ಲೊಬ್ಬನ ಹೆಂಡತಿಯು" (2 ಅರಸು 4:1ಎ) ಆತನ ಹತ್ತಿರ ಬಂದಳು. ಆ ಸ್ತ್ರೀಯ ವಿವರಣೆಯಿಂದ ಆಕೆಯು ಪ್ರವಾದಿಯ ತರಬೇತುದಾರರು ("ಪ್ರವಾದಿ ಮಂಡಲಿಯವರು") ವಯಸ್ಕರಾಗಿದ್ದು US ನಲ್ಲಿ ನಾವು "ಕಾಲೇಜು ಯುಗ" (ಹದಿನೆಂಟರಿಂದ ಇಪ್ಪತ್ತೆರಡು ವಯಸ್ಸಿನವರು) ಎಂದು ಕರೆಯುವಂತೆ ನಾವು ತಿಳಿದುಕೊಳ್ಳುವಾ. ಈ ತರಬೇತುದಾರರು ಬ್ರಹ್ಮಚಾರಿಗಳಾಗಿರಲಿಲ್ಲ ಎಂಬ ಮಾಹಿತಿಯನ್ನು ಇದು ನಮಗೆ ಕೊಡುವುದಾಗಿದೆ. ಅವಿವಾಹಿತ ಅವಸ್ಥೆಯು ವಿವಾಹಿತ ಅವಸ್ಥೆಗಿಂತ ಪರಿಶುದ್ಧವಾಗಿರುತ್ತದೆ ಎಂದು ಕೆಲವರು ಪ್ರತಿಪಾದಿಸುತ್ತಾರೆ, ಆದರೆ "ದಾಂಪತ್ಯವು ಮಾನ್ಯವಾದದ್ದೆಂದು ಎಲ್ಲರು ಪರಿಗಣಿಸಬೇಕು" (ಇಬ್ರಿಯ 13:4ಎ) ಎಂದು ಬೈಬಲ್ ಬೋಧಿಸುತ್ತದೆ.

ಆ ಸ್ತ್ರೀಯು ದುರಂತಕ್ಕೆ ಸಂಬಂಧಿಸಿದಂತಹ ಕಥೆಯನ್ನು ಹೊಂದಿದ್ದಳು. ಅವಳ ಕಣ್ಣೀರು ತುಂಬಿದ ಮುಖವನ್ನು ನೋಡಿರಿ ಮತ್ತು ಅವಳು ನಡುಗುವ ಧ್ವನಿಯಲ್ಲಿ "ನಿನ್ನ ಸೇವಕನಾದ ನನ್ನ ಗಂಡನು ಮರಣಹೊಂದಿದ್ದನು; ಅವನು ಯೆಹೋವನಲ್ಲಿ ಭಯಭಕ್ತಿಯುಳ್ಳವನಾಗಿದ್ದನೆಂಬುದು ನಿನಗೆ ಗೊತ್ತುಂಟಲ್ಲಾ; ಸಾಲಕೊಟ್ಟವನು ನನ್ನ ಎರಡು

ಮಕ್ಕಳನ್ನು ದಾಸರಾಗಿ ತೆಗೆದುಕೊಂಡು ಹೋಗುವುದಕ್ಕೆ ಬಂದಿದ್ದಾನೆ" (2 ಅರಸು 4:1ಬಿ) ಎಂದು ನಡುಗುವ ಧ್ವನಿಯಲ್ಲಿ ಹೇಳಿದಳು. ಅವಳ ಗಂಡನು ಎಲೀಷನ "ಸೇವಕನು" ಎಂದು ಆಕೆಯು ವರ್ಣಿಸಿದಳು, ಮತ್ತು ನಂತರ ತನ್ನನ್ನು ತಾನು ಎಲೀಷನ ದಾಸಿ ಎಂದು ಕರೆದು ಕೊಂಡಳು (ವಚನ 2). ಅವಳು ಮತ್ತು ಅವಳ ಗಂಡ ಇಬ್ಬರೂ ಪ್ರವಾದಿಯ ಬೋಧನೆ ಗಳನ್ನು ಕೇಳುವವರೂ ಮತ್ತು ಲಕ್ಷ್ಯವಹಿಸುವವರೂ ಆಗಿದ್ದರು.

ನಂತರದಲ್ಲಿ ಆಕೆಯು ತನ್ನ ಗಂಡನು ದೇವರಲ್ಲಿ "ಭಯಭಕ್ತಿಯುಳ್ಳವನಾಗಿದ್ದನು" ಎಂದು ಹೇಳಿದಳು: ಆತನು ದೇವರಲ್ಲಿ ಮತ್ತು ಆತನ ವಾಕ್ಯದಲ್ಲಿ ಪರಮಗೌರವವುಳ್ಳ ವನೂ ಆಗಿದ್ದನು. ಯೆಹೂದಿ ಸಂಪ್ರದಾಯದ ಪ್ರಕಾರ ಈ ಮನುಷ್ಯನು ಒಬದ್ಯದಿಂದ ಗವಿಯಲ್ಲಿ ಅಡಗಿಸಿಡಲ್ಪಟ್ಟು ಆಹಾರವನ್ನು ಕೊಡಲ್ಪಟ್ಟ ನೂರು ಜನಪ್ರವಾದಿಗಳಲ್ಲಿ ಈತನೂ ಒಬ್ಬನಾಗಿದ್ದನು ಎಂದು (1 ಅರಸು 18:3, 4).[1] ಅದು ಅಸಂಭವ ಎಂದು ಕಂಡರೂ ಸಹ ಅರಸನಾದ ಆಹಾಬ ಉಗ್ರಾಣಿಕನು ತರಬೇತು ಹೊಂದುವ ಪ್ರವಾದಿಯಾಗಿದ್ದನು. ಒಟ್ಟಿನಲ್ಲಿ ಆ ಸ್ತ್ರೀಯ ಗಂಡನು "ಒಳ್ಳೇಯವ" ನಾಗಿದ್ದನು ಎಂದು ನಾವು ಹೇಳಬಹುದು. ದುರಂತವು ಒಳ್ಳೇಯ ಮನುಷ್ಯರಿಗಾಗಿಯೇ ಬರುತ್ತದೆಯೋ ಹೌದು ಇದು ಆಗಬಹುದು. ಕರ್ತನಿಗೆ ಸೇವೆ ಮಾಡುವುದಕ್ಕಾಗಿ ತಮ್ಮ ಹೃದಯವನ್ನು ಅರ್ಪಿಸಿಕೊಂಡವರಿಗೆ ಇದು ಬರುತ್ತದೆಯೋ ಹೌದು ಇದು ಆಗಬಹುದು ಮತ್ತು ಆಗುತ್ತದೆ.

ಆ ಸ್ತ್ರೀಯ ದೈವಭಕ್ತ ಗಂಡನು ಮರಣಹೊಂದಿದ್ದನು, ಮತ್ತು ಆ ಒಂಟಿತನವು ಅವಳ ಹೃದಯವನ್ನು ಒಡೆದಿರಬಹುದು. ಅವಳು ಆತನನ್ನು ಜೀವನಪೂರ್ತಿ ತನ್ನೊಡನೆ ಇರಲು ಬಯಸಿದ್ದಳು ಆದರೆ ಅವಳು ರಾತ್ರಿ ಒಂಟಿಯಾಗಿ ಮಲಗಬೇಕಾಯಿತು ಅವಳ ಹಾಸಿಗೆಯು ಒಮ್ಮೆಲೆ ದೊಡ್ಡದೂ ಮತ್ತು ಖಾಲಿಯಾಯಿತು. ದುರಂತಕ್ಕೆ ಅಲ್ಲಿ ಕೊನೆಯೆ ಇಲ್ಲ. ಅವಳ ಗಂಡನು ಅವಳಿಗೆ ಇಬ್ಬರು ಚಿಕ್ಕಮಕ್ಕಳನ್ನು ತನ್ನ ಹಿಂದೆ ಬಿಟ್ಟುಹೋಗಿದ್ದನು (2 ಅರಸು 4:1, 5). ಪ್ರಾಚೀನ ಜಗತ್ತಿನಲ್ಲಿ, ಸ್ತ್ರೀಗಿಂತ ಬಲು ಅಸಹಾಯಕ ವ್ಯಕ್ತಿ ಎಂದರೆ ತನ್ನ ರೊಟ್ಟಿಯನ್ನು ಸಂಪಾದಿಸುವವನಿಲ್ಲದ ವಿಧವೆಯು. ಈಕೆಯು ತನ್ನ ಮಕ್ಕಳ ಮೇಲೆ ಆತುಕೊಂಡಿರುತ್ತಾಳೆ, ಇಂದು "ಏಕ ಪೋಷಕರ" ಕಾರ್ಯಕ್ರಮದಲ್ಲಿ ಎಷ್ಟು ಸಂಖ್ಯೆಯಾಗಿರಬಲ್ಲದು ಎಂಬುದನ್ನೂ ನಿಮ್ಮಲ್ಲಿ ಕೆಲವರು ತಿಳಿದಿರಬಹುದು. ಆ ಪೋಷಕರ ಸವಾಲುಗಳನ್ನು ನೂರುಪಟ್ಟಾಗಿ ಯೋಚಿರಿಸಿ ಮತ್ತು ಎಲೀಷನ ಸಮಯದಲ್ಲಿ ಕಷ್ಟವನ್ನು ಎದುರಿಸುತ್ತಿರುವ ಆ ವಿಧವೆ ತಾಯಿಗಾಗಿ ನಿನ್ನಲ್ಲಿ ಕೆಲ ವಿಚಾರಗಳನ್ನು ನೀನು ಹೊಂದಬಹುದು.

ದುರಂತವು ಬಲು ಕೆಟ್ಟದ್ದಾಗುತ್ತಾ ಹೋಯಿತು: ಆ ಸ್ತ್ರೀಯ ಗಂಡನು ಆಕೆಯನ್ನು ಯಾವುದೆ ಆರ್ಥಿಕ ಮೂಲವಿಲ್ಲದೇ ಮಾತ್ರ ಬಿಟ್ಟುಹೋಗಿರಲಿಲ್ಲ, ಆದರೆ ಆತನು ಬಲು ಸಾಲದಲ್ಲಿ ಬಿಟ್ಟುಹೋಗಿದ್ದನು. ಅದು ಹೇಗೆ ಸಂಭವಿಸಿತೆಂದು ನಾವು ತಿಳಿಯೆವು. ಬಹುಶಃ ಆ ಮನುಷ್ಯನು ತಪ್ಪಿತಸ್ಥನಾಗಿದ್ದನು. ಅನೇಕ ಪ್ರಾಮಾಣಿಕರು, ಕೌಶಲ್ಯವುಳ್ಳ ದೇವರ ಸೇವಕರು ಬಲು ಬಡವಾದ ಆರ್ಥಿಕ ನಿರ್ಧಾರಗಳನ್ನು ಮಾಡುವವರಾಗಿರುತ್ತಾರೆ. ಆಕೆಯ ಗಂಡನು ಬಲು ಧಾರಾಳಿಯಾಗಿದ್ದನು ಎಂದು ಸೂಚಿಸಬಹುದಾಗಿದೆ. ಒಬದ್ಯನು ಆಕೆಯ ಗಂಡನಾಗಿದ್ದಾದನು ಎಂದು ಸಂಪ್ರದಾಯಗಳ ಪ್ರಕಾರ ಪ್ರತಿಪಾದಿಸಬಹುದು, ಜೋಸ್ಫಸ್‌ನು ಆತನು ಅಡಗಿಸಿಟ್ಟ[2] - ಪ್ರವಾದಿಗಳಿಗೆ ಆಹಾರಕ್ಕಾಗಿ ಹಣವನ್ನು ಸಾಲವಾಗಿ ತರುತ್ತಿದ್ದನೆಂದು ಮತ್ತು ಆನು ಸತ್ತಾಗ ಆತನ ಹೆಂಡತಿಗೆ ಆ ಹಣವನ್ನು ತಿರಿಸಲು ಯಾವ ಮಾರ್ಗವೂ ಇರಲಿಲ್ಲವೆಂದು ಹೇಳುತ್ತಾನೆ.[3]

ಈ ವಿಷಯದಲ್ಲಿ ಆ ಗಂಡನದು ಯಾವ ತಪ್ಪು ಇರದ ಸಾಧ್ಯತೆಯು ಇದೆ. ಆತನು ದೇವರ ಸೇವಕರನ್ನು ತೃಣೀಕರಿಸುವ ಸ್ಥಳದಲ್ಲಿ ದೇವರ ಸೇವಕನಾಗಿದ್ದನು. ಆತನ ಆದಾಯದ ಮೂಲವು ಏನಾಗಿತ್ತೋ, ಅದು ಅತ್ಯಲ್ಪವಾಗಿತ್ತು. ಒಬ್ಬ ಯಜಮಾನನು ಆತನ ಸಂಬಳವನ್ನು ಕೊಡುವುದರಲ್ಲಿ ವಿಫಲನಾಗಿರಬಹುದು. ಬಹುಶಃ ಜನರು ತಮಗಾಗಿ ಆತನು ಮಾಡಿದ

ಸಾಲವನ್ನು ತೀರಿಸದೆ ಇರಬಹುದು. ಬಹುಶಃ ಆತನು ತಾನು ಸಾಲವನ್ನು ಮರಳಿಸಬಹುದೆಂಬ ನಿಶ್ಚಿತತೆಯು ಅವನಿಗಿತ್ತು, ಅಂತೆಯೆ ಆತನು ತನ್ನ ಕುಟುಂಬಕ್ಕಾಗಿ ಆಹಾರವನ್ನು ಕೊಡಲು ಹಣವನ್ನು ಸಾಲಮಾಡಿರಬಹುದು - ಆದರೆ ಜೀವನವನ್ನು ಅಲ್ಪವಾದದ್ದು ಮತ್ತು ಅನಿಶ್ಚಿತವಾದದ್ದು ಮತ್ತು ಆತನ ಒಳ್ಳೇಯ ವಿಚಾರಗಳು ಅವನೊಡನೆಯೆ ಮರಣಹೊಂದಿದವು.

ಹೀಗೆ ದುರಂತದ ಮೇಲೆ ದುರಂತವು ಒಟ್ಟಿಕೊಂಡವು, ಆದರೆ ಎಲ್ಲವೂ ಕೆಟ್ಟವುಗಳೇ, ಅವಳ ಗಂಡನಿಗೆ ಸಾಲಕೊಟ್ಟವನು ಅವಳ ಮಕ್ಕಳನ್ನು ತೆಗೆದುಕೊಂಡು, ಹೋಗುವದು ಅವುಗಳಲ್ಲಿ ಅತೀ ಭಯಂಕರವಾದುದ್ದು. ಇಂದು ಪ್ರಖ್ಯಾತವಾದ ಸಾಲದ ಸಂಸ್ಥೆಯಿಂದ ನಾವು ಸಾಲವನ್ನು ತೆಗೆದುಕೊಂಡಾಗ, ನಿಯಮದಂತೆ ಯಾವುದನ್ನಾದರೂ ಅಡುವಿಡ ಬೇಕು. ಅದು ಸಾಮಾನ್ಯವಾಗಿ ಆಸ್ತಿಗಳಾದಂತಹ, ಮನೆ ಅಥವಾ ಕಾರು ಅಥವಾ ಭೂಮಿಯಾಗಿರುವಂತಹದನ್ನು ಅದು ಒಳಗೊಂಡಿದೆ. ನೀವು ಸಾಲವನ್ನು ಮರಳಿಸದಿದ್ದರೆ, ಯಾವದು ಅಡವಾಗಿ ಇಡಲ್ಪಟ್ಟಿರಬಹುದೋ ಅದು ತೆಗೆದುಕೊಡಲ್ಪಡುತ್ತದೆ. ಎಲೀಷನ ದಿನದಲ್ಲಿ, ಸಂಭವನೀಯ ಕಾರ್ಯಗಳು ವೈಯಕ್ತಿಕವಾಗಿ ಮಾಡಿದ ಸಾಲಕ್ಕೆ "ಅಡುವಾಗಿಟ್ಟವುಗಳು" ಆಗಿರುತ್ತಿದ್ದವು. ಒಂದು ವೇಳೆ ಸಾಲವು ಮರಳದಿದ್ದರೆ, ಆ ವ್ಯಕ್ತಿಯು (ಮತ್ತು ಆತನ ಕುಟುಂಬವು) ಅವುಗಳನ್ನು ತೆಗೆದುಕೊಳ್ಳುತ್ತಿದ್ದನು (ಮತ್ತಾಯ 18:25). ಇದು ಮೋಶೆಯ ಧರ್ಮಶಾಸ್ತ್ರದ ಅಡಿಯಲ್ಲಿ ಇದಕ್ಕೆ ಒಪ್ಪಿಗೆಯಿದ್ದಾಗ್ಯೂ, ಧರ್ಮಶಾಸ್ತ್ರವು ವಿಧ ಮತ್ತು ದಾಸ್ಯತ್ವದ ದೀರ್ಘತೆಯನ್ನು ಮಿತಿಗೊಳಿಸಲು ಪ್ರಯತ್ನಿಸಿದೆ (ನೋಡಿರಿ ವಿಮೋಚನಕಾಂಡ 21:1, 2; ಯಾಜಕಕಾಂಡ 25:39-41; ಧರ್ಮೋಪದೇಶಕಾಂಡ 15:1-11). (ಮೋಶೆಯ ಧರ್ಮಶಾಸ್ತ್ರದ ಅಡಿಯಲ್ಲಿ ನಾವು ಇಲ್ಲದಿರುವುದಕ್ಕಾಗಿ ಸಂತೋಷಿಸಬಹುದಲ್ಲವೇ?) ಆ ವ್ಯಕ್ತಿಯು ಸಾಲಗಾರನನ್ನೇ ತೆಗೆದುಕೊಂಡು ಹೋಗಲಾರದೆ ಇದ್ದುದರಿಂದ, ಸಾಲಕೊಟ್ಟವನು ತನ್ನ ಮಕ್ಕಳನ್ನು ಸಾಲದ ಹಣದಂತೆ ತೆಗೆದುಕೊಂಡು ಹೋಗಲು ನಿರ್ಣಯಿಸುತ್ತಾನೆ.

ಸಾಲಕೊಟ್ಟವನು ಯಾರೆಂದು ನಮಗೆ ಹೇಳಲ್ಪಟ್ಟಿಲ್ಲ. ಒಂದು ಸಂಪ್ರದಾಯವು ಆತನನ್ನು ಇಸ್ರಾಯೇಲಿನ ಅರಸನಾದ ಆಹಾಬನ ಮಗನಾದ ಯೋರಾಮನೆಂದು ಹೆಸರಿಸಿದೆ.[4] ಆತನು ಯಾರೆ ಆಗಿರಲಿ ಆತನು ಉತ್ತರ ರಾಜ್ಯದಲ್ಲಿನ ದುರವಸ್ಥೆಯಲ್ಲಿನ ನಂಬಿಗಸ್ತಿಕೆಗಾಗಿ ಕರುಣೆಯನ್ನು ಹೊಂದದವನೂ ಆಗಿರಬಹುದು. ಆತನು ಹೃದಯ ಹೀನನೂ, ನಿರ್ಧಯನೂ, ಕರುಣೆಯಿಲ್ಲದವನೂ ಆಗಿದ್ದನು. ಆ ಸ್ತ್ರಿಯ ಮಕ್ಕಳು ಈಗ ಅವಳ ಜೀವವಾಗಿದ್ದರು; ಅವರು ಆಕೆಯ ಕೊನೆಯ ಆಶಾಕಿರಣವೂ ಆಗಿದ್ದರು. ಆಕೆಯು, "ಈ ಹುಡುಗರು ಕೆಲಸಮಾಡುವಷ್ಟು ದೊಡ್ಡವರಾಗುವವರೆಗೆ ಮಾತ್ರ ನಾನು ಬದುಕಿದರೆ, ನಾವು ಸರಿಯಾಗಿರಬಹುದು!" ಎಂದು ಕೊಂಡಿರಬಹುದು. ಸಾಲಕೊಡುವವನು ಇವುಗಳಲ್ಲಿ ಯಾವುದನ್ನೂ ಲೆಕ್ಕಿಸಲಿಲ್ಲ. ಆತನು ಈಗಾಗಲೇ ಆ ಸ್ತ್ರೀಯ ಗಂಡನು ಆಕೆಗಾಗಿ ಬಿಟ್ಟುಹೋದ ಆ ಚಿಕ್ಕ ಮನೆಯನ್ನು ಸುಲಿದುಕೊಂಡನು (ನೋಡಿರಿ 2 ಅರಸು 4:2). ಈಗ ಆತನು ಆಕೆಯ ಆ ತೋಳುಗಳಿಂದ ಅವಳ ಮಕ್ಕಳನ್ನು ಕಸಿದುಕೊಳ್ಳುವುದಕ್ಕಾಗಿ ದಿನವನ್ನು ಗೊತ್ತುಮಾಡಿದನು.[5]

ಹೀಗಾಗಿ ಆ ಸ್ತ್ರೀಯು ಇತರರಿಗೆ ಸಹಾಯಿಸುವುದಕ್ಕೆ ಪ್ರಾಖ್ಯಾತಿಯಾಗಿರುವ ಮನುಷ್ಯನ ಹತ್ತಿರ ಬಂದಳು (ನೋಡಿರಿ 2 ಅರಸು 2:19-22). ಆಕೆಯು ತನ್ನ ಹೃದಯವನ್ನುಆತನ ಮುಂದೆ ತೋಡಿಕೊಂಡಳು. ಆಕೆಯು ಯಾವ ವಿನಂತಿಯನ್ನು ಮಾಡಲಿಲ್ಲ; ಆದರೆ ನಿರಾಶೆಗೊಳಗಾದ, ಮಾತನಾಡಲಾಗದಂತಹ: "ನಾನೇನು ಮಾಡಲಿ?" ಎಂಬ ಪ್ರಶ್ನೆಯನ್ನು ಆತನ ಮುಂದೆ ಇಟ್ಟಳು.

**ಸಹಾಯ**

"ಎರಡು ಸಾರಿ ಸಹಾಯಕ್ಕಾಗಿ ಕೇಳದಿರು"[6] ಇದು ಎಲೀಷನಿಗೆಂದೇ ಹೇಳಲ್ಪಟ್ಟದ್ದಾಗಿದೆ. ಆತನು "ನಾನು ನಿನಗೇನು ಮಾಡಬೇಕೆನ್ನುತ್ತಿ?" (4:2ಎ) ಎಂದು ಕೇಳಿದನು. ವಿಧವೆಯರು

ಮತ್ತು ಅನಾಥರಿಗೆ ದೇವರ ಹೃದಯದಲ್ಲಿ ವಿಶೇಷಸ್ಥಾನವಿದೆ (ನೋಡಿರಿ ಧರ್ಮೋಪದೇಶಕಾಂಡ 10:18; ಕೀರ್ತನೆ 146:9; ಯಾಕೋಬ 1:27). "ದಿಕ್ಕಿಲ್ಲದವರಿಗೆ ತಂದೆಯೂ ವಿಧವೆಯರಿಗೆ ಸಹಾಯಕನೂ [ಅವರ ಹಕ್ಕುಗಳನ್ನು ಕಾಯುವವನೂ] ಆಗಿದ್ದಾನೆ" (ಕೀರ್ತನೆ 68:5). ಹೀಗಾಗಿ ದೇವರ ಮನುಷ್ಯನೂ ಸಹಾಯ ಮಾಡುವುದಕ್ಕೆ ಸಿದ್ಧನಾಗಿದ್ದನು.

ಎಲೀಷನು, ಆ ಸ್ತ್ರೀಯು ಆತನಿಗೆ ಏನು ಮಾಡಬೇಕು ಎಂದು ಹೇಳುವವರೆಗೂ ಕಾಯಲಿಲ್ಲ. ಬದಲಾಗಿ, ಆಕೆಯು ಏನು ಮಾಡಬೇಕು ಎಂಬುದನ್ನು ಆಕೆಗೆ ಹೇಳಿದನು. ಆತನು ಆಕೆಗೆ "ನಿನ್ನ ಮನೆಯಲ್ಲಿ ಏನಿರುತ್ತದೆ" ಎಂದು ಕೇಳುವುದರಿಂದ ಪ್ರಾರಂಭಿಸಿದನು (ವಚನ 2ಬಿ). ಆಕೆಯು ದುಃಖದಿಂದ "ನಿನ್ನ ದಾಸಿಯ ಮನೆಯಲ್ಲಿ ಒಂದು ಬಟ್ಟಲನ್ನು ಮತ್ತು/ಅಥವಾ ಅದಕ್ಕೆ ಸಬಂಧಿಸಿದ್ದನ್ನು ಸೂಚಿಸುವುದಾಗಿದೆ."[7] ಹೀಗೆ NIV ಯಲ್ಲಿ ಸ್ವಲ್ಪಎಣ್ಣೆ ಎಂದಿದೆ. ಕೆಲ ವಿಮರ್ಶಕರು ಇದು ಆ ಸ್ತ್ರೀಯು ತನ್ನ ಸಮಾಧಿಗಾಗಿ ಉಳಿಸಿಕೊಂಡಿರಲಾದ ಸುಗಂಧದ್ರವ್ಯದ ಮುಲಾಮಿನ ಚಿಕ್ಕ ಶೀಶೆಯಾಗಿರಬಹುದು ಎಂದು ಯೋಚಿಸುತ್ತಾರೆ,[8] ಆದರೆ ಹೆಚ್ಚಾದವರು ಅಡಿಗೆಗಾಗಿ, ಸ್ವಸ್ಥಮಾಡುವುದಕ್ಕಾಗಿ, ಶಮನಮಾಡುವದಕ್ಕಾಗಿ ಮತ್ತು ಅಭಿಷೇಕಿಸುವುದಕ್ಕಾಗಿ ಉಪಯೋಗಿಸುವ ಬಲುಸಾಮಾನ್ಯವಾದ ಆಲಿವ್ ಎಣ್ಣೆ ಎನ್ನುತ್ತಾರೆ. ಅದೇನೇ ಇರಲಿ ಯಾವುದೇ ಪರಿಸ್ಥಿತಿಯಲ್ಲಿ, ಆ ಚಿಕ್ಕ ಶೀಷೆಯ ಎಲ್ಲಾ ಎಣ್ಣೆಯನ್ನು ಸಾಲಕೊಟ್ಟವನು ಅವಳಿಗೆ ಉಳಿಸಿದ್ದನು.

F. W. Krummacher ರವರು, ಆ ಸ್ತ್ರೀಯ ಖಾಲಿಯಾದ ಮನೆಯನ್ನು ಹೀಗೆ ಚಿತ್ರಿಸಿದ್ದಾರೆ: "ಬತ್ತಲೆಯಾದ ಗೋಡೆಗಳು, ಖಾಲಿಯಾದ ಶೆಲ್ಫುಗಳು, ಕಟ್ಟಿಗೆಯ ಬೆಂಚುಗಳ ಮುಂದೆ ಇರುವ ಬರಿದಾದ ಮೇಜು, ಕಡ್ಡಿಯ ಚಾಪೆ, ಖಾಲಿಯಾದ ಕೋಣೆ."[9] ಅವಳಿಗೆ ಹೆಚ್ಚೂಕಡಿಮೆ ಏನೂ ಇಲ್ಲದಂತಹ ಅಥವಾ ಕ್ವಚಿತ್ತವಾದದ್ದು ಉಳಿದಿತ್ತು. ಅದಲ್ಲದೆ ಅವಳು ಒಂದು ಸ್ವಲ್ಪವಾದದ್ದನ್ನು ಹೊಂದಿದ್ದಳು ಅದು ಮೊಗೆ ಎಣ್ಣೆ - ಮತ್ತು ಅವಳೇನನ್ನು ಹೊಂದಿದ್ದಾಳೋ ಅದನ್ನೇ ಬಳಸಲು ದೇವರು ಸೂಚಿಸಿದನು. ಎರಡು ಹೇಳಿಕೆಗಳು ಮನದಲ್ಲಿ ಬರುತ್ತವೆ: "ದೇವರು ತಮಗೆ ಸಹಾಯಿಸುವವರಿಗೆ ಸಹಾಯಿಸುವವನಾಗಿದ್ದಾನೆ" ಮತ್ತು "ದೇವರು ಇರುವಾಗ ಅಲ್ಪವಾದವುಗಳೂ ಸಾಕಷ್ಟಾಗುತ್ತದೆ."

ಎಲೀಷನು ಆ ಸ್ತ್ರೀಗೆ, "ಹೋಗು, ನಿನ್ನ ನೆರೆಯವರಿಂದ ಸಿಕ್ಕುವಷ್ಟು ಬರೀ ಪಾತ್ರೆಗಳನ್ನು ಕೇಳಿಕೊಂಡು ಬಾ" (ವಚನ 3ಎ) ಎಂದು ಹೇಳಿದನು. ಇಬ್ರಿಯ ಪದದ ಭಾಷಾಂತರವಾದ "ಪಾತ್ರೆ" ಇದು ಒಂದು ವರ್ಗಕ್ಕೆ ಸೇರಿರುವುದಾಗಿದೆ. ಇದು ಎಲ್ಲಾ ಅಳತೆಯ, ಆಕಾರದ ಮತ್ತು ರಚನೆಯ ಪಾತ್ರೆಗಳನ್ನು ಸೂಚಿಸಲು ಬಳಸುವುದಾಗಿದೆ. ಆಕೆಯು ತೆಗೆದುಕೊಂಡು ಬರುವ ಪ್ರತಿಯೊಂದು ಪಾತ್ರೆಯು ಖಾಲಿಯಾಗಿರಬೇಕು ಎಂಬ ಗುಣವನ್ನು ಆತನು ಸೂಚಿಸಿದನು. "ಸಿಕ್ಕುವಷ್ಟು ಪಾತ್ರೆಗಳನ್ನು" (ವಚನ 3ಬಿ) ಎಂದು ಪ್ರವಾದಿಯು ಈ ಎಚ್ಚರಿಕೆಯನ್ನು ಅದರೊಡನೆ ಸೇರಿಸಿದನು. ಈ ಭಾಗದ ನಿರ್ದೇಷನವನ್ನು ಗಮನಿಸಿರಿ; ಇದರ ಮಹತ್ವವು ನಂತರದಲ್ಲಿ ಸ್ಪಷ್ಟವಾಗುವದು.

ಏನೇ ಆಗಲಿ ನೀವು ಇದನ್ನು ಗಮನಿಸಿ, ಎಲೀಷನ ಸೂಚನೆಗಳು ವಿಚಿತ್ರವಾದವುಗಳು. ಆ ಸ್ತ್ರೀಯು "ನಾನಾದರೋ ನನ್ನ ಮಕ್ಕಳನ್ನು ಕಳೆದುಕೊಳ್ಳುವುದರಲ್ಲಿದ್ದೇನೆ ನೀನಾದರೋ ನನಗೆ ಪಾತ್ರೆಗಳನ್ನು ಕೂಡಿಸಲು ಹೇಳುತ್ತಿದ್ದಿಯಲ್ಲಾ" ಎಂದು ಪ್ರತಿಭಟಿಸಬಹುದಿತ್ತು! - ಆದರೆ ಆಕೆಯು ಹಾಗೆ ಮಾಡಲಿಲ್ಲ. ಅವಳು "ನನ್ನ ನೆರೆಯವರು ನನ್ನ ಕಷ್ಟಗಳು ನನ್ನನ್ನು ಹುಚ್ಚಳನ್ನಾಗಿಸಿವೆ ಎಂದು ಯೋಚಿಸಬಹುದು. ಆ ಎಲ್ಲಾ ಖಾಲಿ ಪಾತ್ರೆಗಳೊಂದಿಗೆ ನಾನೇನು ಮಾಡುತ್ತಿದ್ದೇನೆಂದು ಅವರು ನನ್ನನ್ನು ಕೇಳಿದ್ದಾದರೆ ನಾನೇನನ್ನು ಅವರಿಗೆ ಹೇಳಲಿ?" ಎಂದು ಅವಳು ಹೇಳಬಹುದಿತ್ತು ಆದರೆ ಅವಳು ಹಾಗೆ ಮಾಡಲಿಲ್ಲ. ಕೆಲ ಸಾರಿ ದೇವರ ಆಜ್ಞೆಗಳು ನಮಗೆ ತಿಳಿಯುವಂತೆ ಮಾಡುತ್ತವೆ ಕೆಲಸಾರಿ ಇಲ್ಲ ಆದರೆ ನಾವೇನನ್ನು ಯೋಚಿಸುತ್ತೇವೆಯೋ ಅದಕ್ಕಿಂತಲೂ ನಿಶ್ಚಿತವಾಗಿ ಅದಕ್ಕಿಂತ *ಒಳ್ಳೆಯವುಗಳಿರುತ್ತವೆ.*

ಎಲೀಷನು ತನ್ನ ಸೂಚನೆಯನ್ನು ಮುಂದುವರೆಸಿದನು "ಅನಂತರ ನಿನ್ನ ಮಕ್ಕಳನ್ನು ಒಳಗೆ ಕರಕೊಂಡು ಬಾಗಿಲುಮುಚ್ಚು" (ವಚನ 4ಎ). ಇದು ಏಕಾಂತದಲ್ಲಿ ವೈಯಕ್ತಿಕ ಅದ್ಭುತವಾಗಬೇಕೆಂದು ಆತನು ಬಯಸಿದ್ದನು. "ಆ ಎಣ್ಣೆಯನ್ನು ಪಾತ್ರೆಯಲ್ಲಿ ಹೊಯ್ದು ತುಂಬಿದವುಗಳನ್ನೆಲ್ಲಾ ಒತ್ತಟ್ಟಿಗಿಡು" ಎಂದು ಹೇಳಿದನು (ವಚನ 4ಬಿ).

**ಸಂತೋಷ**

ಆಕೆಯು ಹೋದಳು (ವಚನ 5ಎ) ಮತ್ತು ಪಾತ್ರೆಗಳನ್ನು ಕೂಡಿಸಲು ಪ್ರಾರಂಭಿಸಿದಳು. ಸ್ವಲ್ಪಹೊತ್ತಿನಲ್ಲಿಯೇ, ಆಕೆಯ ಮನೆಯು ದೊಡ್ಡಪಾತ್ರೆ, ಚಿಕ್ಕಪಾತ್ರೆ, ಮಧ್ಯಮಗಾತ್ರದ ಪಾತ್ರೆ, ಹಳೆಯ ಪಾತ್ರೆ ಮತ್ತು ಹೊಸ ಪಾತ್ರೆ, ಅಲಂಕಾರಿಕವಾದ ಪಾತ್ರೆ ಮತ್ತು ಸಾದಾ ಪಾತ್ರೆ, ಪಾತ್ರೆಗಳು ಮತ್ತು ಹೆಚ್ಚು ಪಾತ್ರೆಗಳಿಂದ ತುಂಬಿತ್ತು. ಆಕೆಯು ... ಬಾಗಿಲನ್ನು ಮುಚ್ಚಿದಳು (ವಚನ 5ಬಿ). ನಾನು ಈ ರೀತಿಯಲ್ಲಿ ನಂತರದಲ್ಲಿನ ಸಂಗತಿಯನ್ನು ಹೀಗೆ ಊಹಿಸುತ್ತೇನೆ:

> ಆ ಸ್ತ್ರೀಯು ತನ್ನ ಎಣ್ಣೆಯ ಚಿಕ್ಕ ಪಾತ್ರೆಯನ್ನು ಎತ್ತಿಕೊಂಡಳು. ಅವಳ ಸುತ್ತಲಿರುವ ಪಾತ್ರೆಗಳಿಗೆ ಹೊಂದಿಕೆಯಾಗುವಂತೆ ಹೋಲಿಸಿದರೆ ಅದು ಎಷ್ಟು ಚಿಕ್ಕದೂ ಅಷ್ಟೇ ಮಹತ್ವವಲ್ಲದ್ದೂ ಆಗಿತ್ತು! ಮೊಗೆಯನ್ನು ಹಿಡಿಯುವಾಗ ಅವಳು ತನ್ನ ಉಸಿರನ್ನು ಹಿಡಿದು ಹತ್ತಿರದಲ್ಲಿನ ಪಾತ್ರೆಗೆ ಅದನ್ನು ಹಾಕಿದಳು. ಎಣ್ಣೆಯು, ಹರಿಯಲಾರಂಭಿಸಿತು. ಪಾತ್ರೆಯ ಅಂಚನ್ನು ಮುಟ್ಟುವತನಕ ಹರಿಯಿತು. ಆಕೆಯು ತನ್ನ ಮಗನಿಗೆ, "ಬೇಗನೇ ಇನ್ನೊಂದು ಪಾತ್ರೆಯನ್ನು ತಾ" ಎಂದು ಹೇಳಿದಳು. ಎಣ್ಣೆಯು ಆ ಪಾತ್ರೆಯು ತುಂಬುವತನಕ ಹರಿಯಲು ಪ್ರಾರಂಭಿಸಿತು ಮತ್ತು ಹುಡುಗರು ತಮ್ಮ ತಾಯಿಗೆ ಮೂರನೆಯದನ್ನು ತರಲು ಓಡಿದರು. ಪಾತ್ರೆಯ ನಂತರ ಪಾತ್ರೆಗಳು ಮುಗಿಯಲಾರದ ಮೂಲದಂತೆ ಕಾಣುತ್ತಿರುವುದರಿಂದ ತುಂಬುತ್ತಾ ಬಂದವು (ವಚನ 5ಸಿ). ದುಃಖಕ್ಕೆ ಹೆಸರಾದ ಆ ಮನೆಯಲ್ಲಿ ಸಂತೋಷವು ಮರಳಿತು. ಆ ತಾಯಿಯ ನಗುವು ಅವಳ ಮಕ್ಕಳ ಕೇಕೆ ಯೋಡನೆ ಸೇರಿತು. ಚಿಂತೆಯ ಗೆರೆಗಳು ಅವಳ ಮುಖದಿಂದ ಅಳಸಿ ಹೋದವು, ಅವಳ ಎದೆಯ ಮೇಲಿನ ಭಾರವು ತೆಗೆಯಲ್ಪಟ್ಟಿತು.

ಅಂತಿಮವಾಗಿ, ಆ ಸ್ತ್ರೀಯು ತನ್ನ ಒಬ್ಬ ಮಗನಿಗೆ "ಇನ್ನೊಂದು ಪಾತ್ರೆಯನ್ನು ತಂದಿಡು" ಎನ್ನಲು ಆತನು "ಪಾತ್ರೆಗಳು ತೀರಿದವು" ಎಂದು ಉತ್ತರಿಸಿದನು (ವಚನ 6ಎ). ಅವರು ಕೇಳಿಕೊಂಡು ಬಂದ ಎಲ್ಲವುಗಳು ತುಂಬಿದವು "ಕೂಡಲೇ ಎಣ್ಣೆಯುಕ್ಕುವದು ನಿಂತು ಹೋಯಿತು" (ವಚನ 6ಬಿ): ಆ ಚಿಕ್ಕ ಮೊಗೆಯಿಂದ ಎಣ್ಣೆ ಹರಿಯುವದು ನಿಂತಿಹೋಯಿತು; ಅದ್ಭುತವು ನಿಂತುಹೋಯಿತು. "ಸ್ವಲ್ಪವನ್ನು ಮಾತ್ರ ತೆಗೆದುಕೊಳ್ಳಬೇಡ" ಎಂಬ ಸೂಚನೆಯ ಮಹತ್ವವನ್ನು ಈಗ ಅವಳು ಅರಿತುಕೊಂಡಿರಬೇಕು. ಅಲ್ಪಗಾತ್ರದ ಎಣ್ಣೆಯಿಂದ ಅವಳು ಬಹುಸಂಖ್ಯೆಯ ಪಾತ್ರೆಗಳನ್ನು ಕೂಡಿಸಿದಳು.

ತರುವಾಯ ಆಕೆಯು ದೇವರ ಮನುಷ್ಯನ (ಎಲೀಷನ) ಹತ್ತಿರ ಬಂದು ನಡೆದದ್ದನ್ನೆಲ್ಲಾ ತಿಳಿಸಿದಳು (ವಚನ 7ಎ). ಮತ್ತೇ, ಅವಳ ಕಣ್ಣಲ್ಲಿ ನೀರು ಬಂದಿರಬಹುದು ಮತ್ತು ಅವಳ ಧ್ವನಿಯು ನಡುಗುತ್ತಿರಬಹುದು. ಆದರೆ ಈ ಸಾರಿ ಆ ಕಣ್ಣೀರು ಸಂತೋಷದ ಕಣ್ಣೀರು ಆಗಿತ್ತು ಮತ್ತು ಆಕೆಯ ಧ್ವನಿಯು ಕಾತುರತೆಯಿಂದ ನಡುಗುತ್ತದೆ. ಏನು ಸಂಭವಿಸಿತೆಂದು ಪ್ರವಾದಿಗೆ ಹೇಳಿದಂತೆಯೇ, ತಿರುಗೊಂದಾವರ್ತಿ ಅಲ್ಲೊಂದು ಹೇಳಲಾರದ ಪ್ರಶ್ನೆಯೊಂದಿತ್ತು: "ಈಗ ನಾನೇನು ಮಾಡಬಹುದು?" ಆ ದಿವ್ಯ ಮಾರ್ಗದರ್ಶನವಿಲ್ಲದೇ ಮುಂದಕ್ಕೆ ಹೋಗಲು ಆಕೆಯು ಬಯಸಲಿಲ್ಲ.

ಎಲೀಷನು ಆಕೆಗೆ, "ಹೋಗಿ, ಎಣ್ಣೆಯನ್ನು ಮಾರಿ ಸಾಲತೀರಿಸು; ಉಳಿದ ಹಣದಿಂದ ನೀನೂ ನಿನ್ನ ಮಕ್ಕಳೂ ಜೀವನ ಮಾಡಿರಿ" (ವಚನ 7ಬಿ) ಎಂದು ಹೇಳಿದನು. "ಸಾಲವನ್ನು

ತೀರಿಸು"? ಆಕೆಯ ಪ್ರೀಯ ಮಕ್ಕಳನ್ನು ದಾಸತ್ವಕ್ಕಾಗಿ ತೆಗೆದುಕೊಳ್ಳಲು ಬಂದ ಕೃಪಣತೆಯ, ಹೃದಯ ಹೀನರಿಗೆ ಕೊಡಬೇಕಾ? ನಮ್ಮ ಸಾಲವನ್ನು ತೀರಿಸ ಬೇಕೆಂದು ಬೈಬಲ್ ನಮಗೆ ಬೋಧಿಸುತ್ತದೆ (ನೋಡಿರಿ ರೋಮಾಪುರ 13:8ಎ; NIV). ಹೆನ್ರಿ ಬ್ಲಂಟ್‌ರವರು ಹೀಗೆ ಬರೆಯುತ್ತಾರೆ: "ಸಾಲಕೊಡುವವನು ಹೃದಯ ಹೀನನಾಗಿದ್ದಾಗ್ಯೂ, ನೀನು ಅನ್ಯಾಯಗಾರನಾಗಿರಬೇಡ; ಇತರರ ನಡತೆ ಹೇಗೇ ಇದ್ದರೂ ನಾವು ಇತರರಿಗೆ ಮಾಡಬೇಕಾದ ಕರ್ತವ್ಯ ಮಾತ್ರ ಎಂದಿಗೂ ಬದಲಾಗಬಾರದು"[10] (ನೋಡಿರಿ ರೋಮಾಪುರ 12:21). W. T. Hamilton ರವರು ಹೀಗೆ ಹೇಳಿದ್ದಾರೆ "ಆತನು ತನ್ನ ಪ್ರಾಮಾಣಿಕವಾದ ದುಷ್ಟತನದಿಂದ (ನಿಜವಾಗಿಯೂ) ಪ್ರಾಮಾಣಿಕನಾಗಿದ್ದನು."[11] ಸಾಲವು ಮುಟ್ಟಿದ ನಂತರ ಆ ಸ್ತ್ರೀ ಮತ್ತು ಆಕೆಯ ಮಕ್ಕಳು ತಾವು ದೊಡ್ಡವರಾಗಿ ತಮಗೂ ತಮ್ಮ ತಾಯಿಗೂ ಸಲಹಿಸುವದಕ್ಕೆ ಬೇಕಾಗುವಷ್ಟು ಸಂಪಾದಿಸುವವರೆಗೂ ಅದು ಉಳಿದಿರಬಹುದು.

ಬೈಬಲ್ ಕಥೆಯು ಇಲ್ಲಿ ಕೊನೆಯಾಗುತ್ತದೆ, ಆದರೆ ನಂತರದ ಪರಿಣಾಮವನ್ನು ಊಹಿಸಿಕೊಳ್ಳುದು ಕಷ್ಟವೇನಲ್ಲ:

> ಎಣ್ಣೆಯು ಮಾರಾಟವಾಯಿತು. ಸಾಲಕೊಟ್ಟವನು ಮರಳಿ ಬಂದಾಗ, ಆ ತಾಯಿ ಮತ್ತು ಅವಳ ಮಕ್ಕಳೂ ಅವನಿಗಾಗಿ ಕಾಯುತ್ತಿದ್ದರು. ಆಕೆಯು ನಾಣ್ಯದ ಚೀಲ ವನ್ನು ಆತನ ಕೈಗಳಲ್ಲಿ ನೂಕಿದಳು "ನಿನ್ನ ಹಣ ಇಲ್ಲಿದೆ" ಎಂದಳು. ಆತನ ಬಾಯಿ ತೆರೆಯುವುದನ್ನು ತಡೆಯಿತು. "ಆದರೆ, ಆದರೆ, ಆದರೆ" ಎಂದು ಆತನು ತೊದಲತೊಡಗಿಸಿದನು. ಆಕೆಯು ಮುಂದುವರೆಸುತ್ತಾ, "ನಮ್ಮ ದೇವರು ನಮಗಾಗಿ ಕಾಳಜಿ ಹೊಂದಿದವನಾಗಿದ್ದಾನೆ, ಮತ್ತು ನಮ್ಮನ್ನು ನಿನ್ನ ಕಠಿಣವಾದ, ಹೃದಯದಿಂದ ರಕ್ಷಿಸಿದನು. ನೀನು ಹಣವನ್ನು ತೆಗೆದುಕೋ ಮತ್ತು ನಾನು ನನ್ನ ಮಕ್ಕಳನ್ನು ಇಟ್ಟುಕೊಳ್ಳುವೆ!" ಎಂದು ಹೇಳಿದಳು. ಸಾಲಕೊಟ್ಟವನು ತನ್ನ ತಲೆಯನ್ನು ಅಲ್ಲಾಡಿಸುತ್ತಾ ಹೊರನಡೆದಾಗ ಅವಳ ಮುಖದುದ್ದಕ್ಕೂ ಮುಗುಳ್ನೆಗೆಯು ಅರಳಿತು.[12]

## ನಿರೀಕ್ಷೆಯಿಲ್ಲದ ಇಂದಿನ ಕುಟುಂಬಗಳು

ಈ ಅಲುಗಾಡಿಸುವಂತಹ ಕಥೆಯಿಂದ ನಾವು ಕಲಿಯಬಹುದಾದ ಪಾಠ ಇದೆಯಾ? ಹೌದು ಅದು "ಪೂರ್ವದಲ್ಲಿ ಬರದದ್ದೆಲ್ಲಾ ನಮ್ಮನ್ನು ಉಪದೇಶಿಸುವುದಕ್ಕಾಗಿಯೇ ಬರೆಯಲ್ಪಟ್ಟಿದೆ" (ರೋಮಾಪುರ 15:4).

### ಹೃದಯ ಒಡೆಯುವಂತಹದು

ಕಥೆಯು ತೆರೆದಂತೆಯೇ, ನಿರೀಕ್ಷೆಯಿಲ್ಲದ ಕುಟುಂಬ ನಮಗೆ ಪರಿಚಯಿಸಲ್ಪಡುವದು. ಇದೊಂದು ದೈವೀಕ ಕುಟುಂಬವಾಗಿತ್ತು, ಆದರೆ ಹೃದಯದ ನೋವು ಇನ್ನೂ ಬರಬೇಕಿದೆ. ಈ ಪಾಪ - ತುಂಬಿದ ಲೋಕದಲ್ಲಿ, ಕೆಲಸಾರಿ ಒಳ್ಳೆಯ ಜನರಿಗೆ ಕೆಟ್ಟ ಸಂಗತಿಗಳು ಸಂಭವಿಸುವವುಗಳು ಆಗಿರುತ್ತದೆ. ಕುಂಬವು ಮರಣ ಮತ್ತು ಸಾಲಗಳಿಂದ ಹೃದಯವೇದನೆಯನ್ನು ಅನುಭವಿಸಿದೆ. ಅವುಗಳು ಅಂದರೆ ಎರಡು "d" ಗಳು ಮನೆಯನ್ನು ನಾಶಮಾಡುತ್ತವೆ. ಇತರ "d" ಗಳು "ರೋಗ" "ಬಿಟ್ಟುಹೋಗು ವಿಕೆ" ಮತ್ತು "ವಿಚ್ಛೇದನ" ಆಗಿವೆ. ಬಹುಶಃ ನಿಮ್ಮಲ್ಲಿ ಕೆಲವರು ಮನೆಗಳನ್ನು ಭಗ್ನವಾದ ಆಶಾಕಿರಣದೊಂದಿಗೆ ಜೀವಿಸುತ್ತಿರುತ್ತಾರೆ.

ಆ ವಿಧವೆಯು ತನ್ನ ಸಮಸ್ಯೆಗಾಗಿ ಕರ್ತನನ್ನು ದೋಷಿಸಲಿಲ್ಲ ಎಂಬುದನ್ನು ಗಮನಿಸಿರಿ. ಬದಲಾಗಿ ಆಕೆಯು ಸಹಾಯಕ್ಕಾಗಿ ಆತನೆಡೆಗೆ ತಿರುಗಿದಳು. ಕೆಲವರ ಜೀವನದಲ್ಲಿ ಸಮಸ್ಯೆಗಳು ತುಂಬಿಕೊಂಡಿರುವಾಗ, ಅವರು ದೇವರಂತಹ, ಬೈಬಲ್‌ನಂತಹ, ಮತ್ತು ಚರ್ಚ್‌ನಂತಹ ದಿವ್ಯ ಸಹಾಯದ ಮೂಲಗಳಿಂದ ತಮ್ಮನ್ನು ತಾವು ದೂರವಿರಿಸಿಕೊಳ್ಳುತ್ತಾರೆ. ನಿನ್ನ ಜೀವನದಲ್ಲಿ

ಯಾವ ಸಮಸ್ಯೆಗಳು ಬಂದರೂ ಚಿಂತೆಯಿಲ್ಲ, ಕರ್ತನು ನಿನ್ನನ್ನು ಪ್ರೀತಿಸುತ್ತಾನೆ ಮತ್ತು ನಿನಗೆ ಸಹಾಯಮಾಡಲು ಬಯಸುತ್ತಾನೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ (ರೋಮಾಪುರ 5:8; ಇಬ್ರಿಯ 13:6; 1 ಪೇತ್ರ 5:7).

**ಸಹಾಯ**

ಕುಟುಂಬದ ಸ್ಥಿತಿಗಳು ನಿರಾಶದಾಯಕವಾದಾಗ ನಾವೇನನ್ನು ಮಾಡಬಲ್ಲೆವು? ಮೊದಲು ನಾವು, ವಿಧವೆಯು ಮಾಡಿದಂತೆ ನಮಗೆ ಯಾವ ಸಮಸ್ಯೆ ಇದೆ ಎಂಬುದನ್ನು ಅರಿತುಕೊಳ್ಳುವಷ್ಟು ನಮ್ರರಾಗಿರಬೇಕು. ತಾವು ಕುಟುಂಬದ ಸಮಸ್ಯೆಯನ್ನು ಹೊಂದಿದ್ದೇವೆ ಎಂಬುದನ್ನು ಒಪ್ಪಿಕೊಳ್ಳುವಲ್ಲಿ ಕೆಲವರು ಅವಮಾನಪಟ್ಟುಕೊಳ್ಳುತ್ತಾರೆ, ಮತ್ತು ಅದನ್ನು ನಿರಾಕರಿಸುವದರಲ್ಲಿ ಉಳಿಯುತ್ತಾರೆ. ಕೇವಲ ಅವಶ್ಯಕತೆಗಳ ಅರಿವುಳ್ಳವರಿಗೆ ಮಾತ್ರ ಸಹಾಯವನ್ನು ಪಡೆಯುತ್ತಾನೆ (ಪ್ರಕಟನೆ 3:20; ನೋಡಿರಿ ಕೀರ್ತನೆ 81:10ಬಿ).[13]

ನಂತರ "ಈ ಸಮಸ್ಯೆಯನ್ನು ನಿವಾರಿಸಲು ನಾವು ಮಾಡಬೇಕಾದದ್ದನ್ನು ನಾವು ಮಾಡಿದ್ದೇವೆಯಾ?" ಎಂದು ಕೇಳುವದು ಅವಶ್ಯವಿದೆ. ಎಲೀಷನು ಆ ಸ್ತ್ರೀಗೆ, "ನಿನ್ನ ಮನೆಯಲ್ಲಿ ಏನಿರುತ್ತದೆ?" ಎಂದು ಕೇಳಿದನು (2 ಅರಸು 4:2). ಅವಳಲ್ಲಿನ ಸಂಪನ್ಮೂಲಗಳನ್ನು ಪರೀಕ್ಷಿಸುವದು ಅವಳಿಗೆ ಅವಶ್ಯವಿತ್ತು. ಅವಳಲ್ಲಿ ಬಹಳೇನು ಇರಲಿಲ್ಲ, ಆದರೆ ಅವಳು ಬಹಳಷ್ಟು ಇರಲಿಲ್ಲ ಎಂಬುವಂತದ್ದನೇ ಹೊಂದಿದ್ದಳು. ಅವಳೇನನ್ನು ಹೊಂದಿದ್ದಳೋ ಅದನ್ನೇ ಬಳಸುವ ಅವಶ್ಯಕತೆಯು ಅವಳಿಗಿತ್ತು (ನೋಡಿರಿ ವಿಮೋಚನ ಕಾಂಡ 4:2; ಮಾರ್ಕ 6:38); ಅವಳು ತನ್ನ ಸ್ವಂತದ ಭಾರವನ್ನು ಹೊಂದಿದ್ದಳು ಅದಕ್ಕಾಗಿ ಮಾಡುವ ಅವಶ್ಯಕತೆಯು ಅವಳಿಗಿತ್ತು (ನೋಡಿರಿ ಮಾರ್ಕ 14:8ಎ; ಗಲಾತ್ಯ 6:5). "ಸಹಾಯ ಹಸ್ತವು ನಮ್ಮ ತೋಳ ಕೊನೆಯ ಮೇಲೆ ಸಿಕ್ಕುವದು ಕೆಲ ಸಾರಿ ಒಳ್ಳೇಯ ಸ್ಥಳವಾಗಿರುತ್ತದೆ" ಎಂದು ಹೇಳಲ್ಪಟ್ಟಿದೆ. Hamilton ಬರೆಯುವುದೇನೆಂದರೆ,

> ಒಬ್ಬನು ತಾನು ಹೊಂದಿದ್ದನ್ನು ಉಪಯೋಗಿಸಿದರೆ ಮತ್ತು ಸಾಧ್ಯವಿದ್ದ ಮಟ್ಟಿಗೆ ಆ ಮಾರ್ಗದಲ್ಲಿ ಹೋಗಬಹುದಾದರೆ, ಆಗ ದೇವರು ಅದನ್ನು ತನ್ನ ವಶಕ್ಕೆ ತೆಗೆದುಕೊಳ್ಳುವನು. *ಅಲ್ಲಿಯವರೆಗೆ* ಆತನು ಅಧಿಕಾರ ವಹಿಸುವ ವಾಗ್ದಾನವನ್ನು ಆತನೆಂದಿಗೂ ಮಾಡುವುದಿಲ್ಲ. ಒಬ್ಬನು ತನ್ನ ಮಾರ್ಗಗಳು ಸ್ಪಷ್ಟವಾಗಿರುವುದನ್ನು ನೋಡಬಹುದು ಮತ್ತು ಆತನ ಸಂಪನ್ಮೂಲಗಳು ಖಾಲಿಯಾಗುವ ತನಕ ನಂಬಿಕೆಯಿಂದ ಗುರಿಯವರೆಗೆ ನಡೆಯುವ ಯೋಜನೆಯನ್ನು ಯೋಜಿಸಬಹುದು. ಕೊನೆಯಲ್ಲಿ ದೇವರು ಅಧಿಕಾರವಹಿಸುವನು. ಮತ್ತು ನಂತರ ಅಲ್ಲಿಯವರೆಗೆ ಅಲ್ಲ![14]

ನೀವು ವೈಯಕ್ತಿಕವಾಗಿ ಮಾಡಬಹುದಾದ್ದನ್ನು ಮಾಡಿದ ನಂತರ, ಜ್ಞಾಣನಾದ ಕ್ರೈಸ್ತನೆಡೆಗೆ ನೀವು ತಿರುಗಿಕೊಳ್ಳುವದು ನಿಮಗೆ ಅವಶ್ಯವಿದೆ, ಆ ಸ್ತ್ರೀಯು ಕೂಡಾ ಎಲೀಷನೆಡೆಗೆ ಬಂದಳು (ನೋಡಿರಿ ಗಲಾತ್ಯ 6:2; ಜ್ಞಾನೋಕ್ತಿ 1:5; 11:14; 12:15; 19:20; 27:9). ಸಮಸ್ಯೆಗೆ ಹತ್ತಿರವಿಲ್ಲದವರು ಸದಾ ಪರಿಸ್ಥಿತಿಯನ್ನು ಸ್ಪಷ್ಟವಾಗಿ ನೋಡುವರು ಮತ್ತು ಪರಿಹಾರವನ್ನು ಸೂಚಿಸುವರು.

ಎಲ್ಲಕ್ಕಿಂತ ಹೆಚ್ಚಾಗಿ ಕರ್ತನಲ್ಲಿ ವಿಶ್ವಾಸವಿಡುವದು ನಿಮಗೆ ಅವಶ್ಯವಿದೆ. ಅನೇಕ ಪ್ರಸಂಗಗಳು "ಕೆಲವನ್ನು ಮಾತ್ರ ಕಡತೆಗೆದುಕೊಳ್ಳಬೇಡ" (2 ಅರಸು 4:3; KJV) ಎಂಬುದರ ಮೇಲೆ ಪ್ರಸಂಗಿಸಲ್ಪಟ್ಟಿವೆ. ಆ ಸ್ತ್ರೀಯು ಬಹು ಸಂಖ್ಯೆಯ ಪಾತ್ರೆಗಳನ್ನು ಕಡತೆಗೆದುಕೊಳ್ಳುವುದರ ಮೂಲಕ ಸ್ವಯಂಕೃತವಾಗಿ ಕೇವಲ ಸೀಮಿತವಾದ ಆಶೀರ್ವಾದದ ಮೇಲಿನವುಗಳನ್ನು ಪಡೆದಳು ಎಂದು ಸೂಚನೆಯು ಅಲ್ಲಿ ಮಾಡಲ್ಪಟ್ಟಿದೆ. (ಆ ಸ್ತ್ರೀಯು ಹೆಚ್ಚಿನವುಗಳನ್ನು ಕಡತೆಗೆದುಕೊಳ್ಳಬಹುದು ಎಂದು ಆಶಿಸಿದಳೇ?) ಬೈಬಲ್

ಬೋಧಿಸುವುದೇನೆಂದರೆ ನಮ್ಮ ದೇವರು ಉದಾರವಾದ ದೇವರಾಗಿದ್ದಾನೆ ಎಂದು (ಮತ್ತಾಯ 6:33; 7:7, 8; ಎಫೆಸ 3:20). ಸರಳಮನಸ್ಸಿನಿಂದ ನಮ್ಮ ವಿಶ್ವಾಸವನ್ನು ಆತನಲ್ಲಿಡುವುದಕ್ಕೆ ನಮ್ಮ ಒಪ್ಪಿಕೊಳ್ಳುವಿಕೆ ಇದ್ದರೆ ಮಾತ್ರ ಉದಾರತೆಯು ಇರುವುದಾಗಿದೆ. ನಿಮ್ಮ ಸಮಸ್ಯೆಗಳನ್ನು ಆತನೆಡೆಗೆ ತರುವುದನ್ನು ಕಲಿತಾಗ, "ಎಲ್ಲಾ ಗ್ರಹಿಕೆಯನ್ನು ಮೀರಿರುವ" ದೇವ ಶಾಂತಿಯನ್ನು ಆಗ ನೀವು ತಿಳಿದುಕೊಳ್ಳುತ್ತೀರಿ (ಫಿಲಿಪ್ಪಿ 4:7).

**ಸಂತೋಷ**

ಆ ರೀತಿಯ ನಿರೀಕ್ಷೆಯಿಲ್ಲದಂತ ಪರಿಸ್ಥಿತಿಗಳನ್ನು ಕಾಣುವಂತಹ ಕುಟುಂಬವನ್ನು ನೀವು ಹೊಂದಿದ್ದೀರಾ? ನೀನು ಮಾಡಬಹುದಾದ ಎಲ್ಲವನ್ನೂ ಮಾಡು ಮತ್ತು ಕರ್ತನಲ್ಲಿ ವಿಶ್ವಾಸವಿಡು ಮತ್ತು ಆತನು ನಿನಗೆ ಸಹಾಯಿಸುವನು. ಆತನು ಹೇಗೆ ಸಹಾಯಿಸುವನು ಎಂಬುದನ್ನು ನಾನು ನಿನಗೆ ಖಚಿತವಾಗಿ ಹೇಳಲಾರೆನು. ಆತನು ನಿನ್ನ ಸಮಸ್ಯೆಯನ್ನು ತೆಗೆದುಹಾಕಬಹುದು; ಆತನು ನಿನ್ನ ಸಮಸ್ಯೆಗಳನ್ನು ನೀನು ತಾಳಿಕೊಳ್ಳುವಂತೆ ಸಹಾಯಿಸಬಹುದು. ಇದು ಬಲು ಖಚಿತವಾದದ್ದು: ಆತನಿಗೆ ನಿನ್ನನ್ನು ನೀನು ಒಪ್ಪಿಸಿಕೊಟ್ಟಿದೆಯಾದರೆ, ಆತನು ನಿನಗೆ ಸಹಾಯ ಮಾಡುತ್ತಾನೆ ಮತ್ತು ಮಾಡಬಹುದು. ನೂರಾರು ಅಲ್ಲದಿರಬಹುದು, ಡಜನ್‌ಗಟ್ಟಲೇ ಕ್ರೈಸ್ತ ಮನೆಗಳನ್ನು ನಾನು ಬಲ್ಲೆನು ಆದರೆ ಅವುಗಳು ಈಗ ಸಂತೋಷದಿಂದ ತುಂಬಿವೆ.

ಕೆಲವರು "ದೇವರು ವಿಧವೆಗೆ ಸಹಾಯಿಸಲು ಅದ್ಭುತವನ್ನು ಮಾಡಿದನು, ಮತ್ತು ಈ ಅದ್ಭುತಗಳ ಯುಗದಲ್ಲಿ ಬಹುದಿನ ನಾನು ಇರಲಾರೆನು, ಹೀಗಿದ್ದಾಗ ಆತನು ನನಗೆ ಹೇಗೆ ಸಹಾಯಿಸಬಲ್ಲನು?" ಎಂದು ಕೇಳುವುದುಂಟು. ದೇವರು ಕೇವಲ ಅದ್ಭುತಕಾರ್ಯಗಳ ಮೂಲಕ ಮಾತ್ರ ಕೆಲಸಮಾಡುತ್ತಾನೆ ಎಂದು ಯೋಚಿಸುವಂತಹ ವ್ಯಕ್ತಿಗಳು ಎಂತಹ ಸಣ್ಣ ಮನಸ್ಸಿನವರಲ್ಲವೇ! ದೇವರು ಸೃಷ್ಟಿಯನ್ನು ನಿರ್ಮಿಸಿದನು, ಮತ್ತು ಆತನು ಆ ಕಡೆಗೆ ಇಟ್ಟಂತಹ ನಿಸರ್ಗದ ನಿಯಮದ ಮೂಲಕ ಹೇಗೆ ಕಾರ್ಯಮಾಡಬೇಕೆಂಬುದನ್ನು ಆತನು ಬಲ್ಲವನಾಗಿದ್ದಾನೆ. ಇದನ್ನು ನಾವು "ದಿವ್ಯ ದೈವಸಂಕಲ್ಪ" ಎನ್ನುತ್ತೇವೆ. ರೋಮಾಪುರ 8:28 ನನ್ನ ಪ್ರಿಯವಾದ ಒಂದು ಭಾಗವಾಗಿದೆ ಅದು "ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ."

ಮಾಥ್ಯೂ ಹೆನ್ರಿ ಬರೆಯುವುದೇನೆಂದರೆ, "ನಾವು ಅದ್ಭುತಗಳನ್ನು ನಿರೀಕ್ಷಿಸುವಂತಿರಲಿಕ್ಕಿಲ್ಲ ಈಗ ನಾವು ಕೃಪೆಯನ್ನು ನಿರೀಕ್ಷಿಸುವವರಾಗಿದ್ದೇವೆ."[15] Warren Wiersbe ಈ ರೀತಿ ಯಾಗಿ ವಿಮರ್ಷಿಸಿದ್ದರೆ: ನಾವು ನಮ್ಮ ಸಾಲವನ್ನು ಕೊಡುವುದಕ್ಕೆ ಸಹಾಯಿಸಲು ಕರ್ತನು ... ಅದ್ಭುತಗಳನ್ನು ... ಮಾಡುವುದಿಲ್ಲ, ಆದರೆ ನಾವು ಆತನಲ್ಲಿ ವಿಶ್ವಾಸವಿಟ್ಟು ವಿಧೇಯರಾ ನಮ್ಮ ಅವಶ್ಯಕತೆಗಳನ್ನು ಆತನು ಸಂಧಿಸಬಲ್ಲನು. ನಾವು ಎಲ್ಲವನ್ನು ಆತನಿಗೆ ಒಪ್ಪಿಸಿದಾಗ, ಆತನು ಉದ್ದವಾದ ಮಾರ್ಗದಲ್ಲಿ ಹೋಗುವುದಕ್ಕಿಂತ ಚಿಕ್ಕ ದಾರಿಯನ್ನು ಆತನು ನಮಗಾಗಿ ಮಾಡುವನು.[16] Krummacher ರವರು, "ತನ ಸಹಾಯವು ನಿಜವಾಗಿ ಕಡಿಮೆ ಅದ್ಭುತವಾ ಗಿದೆ ಯಾಕೆಂದರೆ ಅದು ಸಾಮರ್ಥ್ಯದಿಂದ ನಮಗೆ ಕಳಿಸಲ್ಪಟ್ಟಿದೆಯೇ?"[17] ಎಂದು ಕೇಳಿ ದ್ದಾರೆ. ಇಲ್ಲ! ಎಂದು ಧ್ವನಿಗೂಡಿಸುವುದರೊಡನೆ ನಾವು ಉತ್ತರಿಸಬಹುದು. "ಯೆಹೋವನು ಕೃಪಾಳುವೂ ನೀತಿವಂತನೂ ಆಗಿದ್ದಾನೆ; ನಮ್ಮ ದೇವರು ಕನಿಕರವುಳ್ಳವನು" (ಕೀರ್ತನೆ 116:5)!

## ಮುಕ್ತಾಯ

ಬಹಳ ದಿನಗಳ ಹಿಂದೆ ದೇವರು ಆ ಕುಟುಂಬಕ್ಕೆ ಸಹಾಯಿಸಿದನು, ಮತ್ತು ಆತನು ನಿಮ್ಮ ಕುಟುಂಬಕ್ಕೂ ಸಹಾಯಿಸುವನು - ಒಂದು ವೇಳೆ ನೀನು ಅದಕ್ಕೆ ಅನುಕೂಲ ಮಾಡಿ

ಕೊಡುವುದಾದರೆ ಮಾತ್ರ. ದೇವರ ಸಹಾಯದ ಭರವಸೆಯನ್ನು ಹೊಂದುವುದಕ್ಕಾಗಿ, ಮೊದಲು ಕರ್ತಗಿರುವ ನಿಮ್ಮ ಸಂಬಂಧವು ಸರಿಯಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವದು ನಿನಗೆ ಅವಶ್ಯವಿದೆ. ಈ ವೇದಭಾಗದ ಉದ್ದೇಶವು ಕ್ರೈಸ್ತರಾಗುವುದು ಹೇಗೆ ಎಂಬುದನ್ನು ಈ ದಿನ ಜನರಿಗೆ ಬೋಧಿಸುವುದಲ್ಲ, ಆದರೆ ಆಸಕ್ತಿಯುತ ಹೋಲಿಕೆಗಳನ್ನು ಇದರಿಂದ ಎಳೆದು ಕೊಳ್ಳಬಹುದಾಗಿದೆ:

- ಆ ಸ್ತ್ರೀಯು ತೀರಿಸಲಾಗಿದಂತಹ ಸಾಲವನ್ನು ಹೊಂದಿದ್ದಳು. ನಾವು ಪಾಪದ ಸಾಲದ ಭಾರದ ಜೊತೆಗಿದ್ದೇವೆ, ಈ ಸಾಲವು ನಾವು ಎಂದಿಗೂ ತೀರಿ ಸಲಾಗದ್ದಾಗಿದೆ (ನೋಡಿರಿ ಯೆಶಾಯ 64:6; ರೋಮಾಪುರ 6:23ಎ).
- ಆಸ್ತ್ರೀಯ ಮಕ್ಕಳು ದಾಸತ್ವಕ್ಕೆ ಹೋಗುವ ಭಯದಿಂದಿದ್ದರು. ನಾವು ಪಾಪದ ದಾಸರಾಗಿದ್ದೇವೆ (ನೋಡಿರಿ ತೀತ 3:3; 2 ಪೇತ್ರ 2:19; ರೋಮಾಪುರ 6:6).
- ದೇವರು ಆ ವಿಧವೆಗೆ ಮಾಡಿದಂತೆಯೇ, ನಮಗಾಗಿಯೂ ಸಹ ಕೃಪಾಪೂರಿತ ದೈವಸಂಕಲ್ಪವನ್ನು ಮಾಡಿದ್ದಾನೆ, ಆದರೆ ಮೊದಲು ನಾವೇನನ್ನು ಮಾಡಬೇ ಕಾಗಿದೆಯೋ ಅದನ್ನು ಮಾಡುವುದನ್ನು ಆತನು ಬಯಸುವವನಾಗಿದ್ದಾನೆ. ತನ್ನಲ್ಲಿ ಭರವಸವಿಡಬೇಕೆಂದು ನೀರಿನಲ್ಲಿ ಮುಳುಗುವ ಮೂಲಕ, ಮತ್ತು ನಂತರ ಆತನಿಗಾಗಿ ಜೀವಿಸುವುದನ್ನು ಆತನು ಕೇಳುವವನಾಗಿದ್ದಾನೆ (ಮಾರ್ಕ 16:16; ರೋಮಾಪುರ 6:3-6; ಗಲಾತ್ಯ 3:26, 27).
- ಒಂದು ವೇಳೆ ನಮ್ಮನ್ನು ನಾವು ಆತನಿಗೆ ಮತ್ತು ಆತನ ಚಿತ್ತಕ್ಕೆ ಒಪ್ಪಿಸಿದ್ದೇ ಆದರೆ, ಆತನು ಆ ಇಸ್ರಾಯೇಲ್ಯರ ವಿಧವೆಯ ಮೊಗೆಯನ್ನು ತುಂಬಿದಂತೆ ಖಚಿತವಾಗಿ ನಮ್ಮ ಖಾಲಿ ಜೀವಿತ ವನ್ನು ತುಂಬಿಸುವವನೂ ಆಗಿದ್ದಾನೆ. ಆತನು ನಮ್ಮ ಪಾಪಗ ಳನ್ನು ಕ್ಷಮಿಸಿಬಿಡುವನು (ಅಪೊಸ್ತಲರ ಕೃತ್ಯಗಳು 2:38), ನಿತ್ಯ ಜೀವಿತದ ನಿರೀಕ್ಷೆ ಯನ್ನು ನಮಗಾಗಿ ಕೊಡುವವನೂ (ತೀತ 1:2), ಮತ್ತು ದಿನದಿನಕ್ಕೂ ನಮ್ಮನ್ನು ಬಲಪಡಿಸುವವನೂ (ಎಫೆಸ 6:10) ಆಗಿದ್ದಾನೆ.

ನಮ್ಮ "ಪಾತ್ರೆಯನ್ನು" ಪ್ರೀತಿಯಿಂದ ತುಂಬಿ ಹೊರಸೂಸುವಂತೆ (ನೋಡಿರಿ 1 ತಿಮೊಥೆ 1:14) ಮಾಡುವವನಿಗೆ ಸ್ತೋತ್ರವಾಗಲಿ (ನೋಡಿರಿ ಕೀರ್ತನೆ 23:5)!

---

ಟಿಪ್ಪಣಿಗಳು

[1]Donald J. Wiseman, *1 and 2 Kings: An Introduction and Commentary,* Tyndale Old Testament Commentaries (Downers Grove, Ill.: Inter-Varsity Press, 1993), 202. ಜೋಸ್ಪಸ್‌ನು ಸೂಚಿಸುವುದೇನೆಂದರೆ ಆ ಸ್ತ್ರೀಯು ಒಬದ್ಯನ ವಿಧವೆಯಾಗಿದ್ದಳು ಎಂದು (*Antiquities 9.4.2*). [2]Wiseman, 202. [3]ಇತರೆ ಪ್ರವಾದಿ ಮಂಡಲಿಯವರು ಆಕೆಯ ಬಿಡುಗಡೆಗೆ ಯಾಕೆ ಬರಲಿಲ್ಲ ಎಂದು ಕೇಳಲ್ಪಡಬಹುದು ಎಲ್ಲಾ ಪ್ರವಾದಿ ಮಂಡಲಿಯವರು ಆರ್ಥಿಕ ಸಂಪನ್ಮೂಲಗಳನ್ನು ಹೊಂದಿರಲಿಲ್ಲ ಎಂದು 2 ಅರಸು 4:38-44 ರಲ್ಲಿ ಸೂಚಿಸುತ್ತದೆ. [4]Adam Clarke, *The Holy Bible with a Commentary and Critical Notes*, vol. 2, *Joshua–Esther* (New York: Abingdon-Cokesbury Press, n.d.), 490. [5]"ಸಾಲಗಾರನು ನನ್ನ ಎರಡು *ಮಕ್ಕಳನ್ನು* ತೆಗೆದುಕೊಂಡು ಹೋಗಲು ಬಂದಿದ್ದಾನೆ" ಎಂದು ಹೇಳಿ ದಳು (ವಚನ 1 ಒತ್ತಿ ಹೇಳಿದ್ದು ನನ್ನದು), ಆದರೆ ಆ ಮಕ್ಕಳು ಇನ್ನೂಅವಳ ಹತ್ತಿರವೇ ಇವೆ (ವಚನಗಳು 4-6) ಕೊನೆಯ ಸಾರಿ ಸಾಲಗಾರನು ಅವಳ ಮನೆಯಲ್ಲಿದ್ದಾಗ (ಖಾಲಿ ಮಾಡುವಾಗ), ಆತನು ತಿರುಗಿ ಬರುವಾಗ ಅವಳ ಮಕ್ಕಳನ್ನು ತೆಗೆದುಕೊಂಡು ಹೋಗುವುದಾಗಿ ಹೇಳಿರ ಬಹುದು. [6]Richard Newton, *Bible Models* (London: Hodder and Stoughton, 1887), 193. [7]C. F. Keil and F. Delitzsch, "1 and 2 Kings," *Commentary on*

*the Old Testament,* vol. 3, *1 and 2 Kings, 1 and 2 Chronicles, Ezra, Nehemiah, Esther* (Peabody, Mass.: Hendriksen Publishers, 1989), 309; G. Rawlinson, "2 Kings," *The Pulpit Commentary,* vol. 5, *1 & 2 Kings* ed. H. D. M. Spence and Joseph S. Exell (Grand Rapids, Mich.: Wm. B. Eerdmans Publishing Co., 1950), 64. [8]Clarke, 491. [9]F. W. Krummacher, *Elisha, a Prophet for Our Times* (Grand Rapids, Mich.: Kregel Publications, 1993), 48. [10]Henry Blunt, *Lectures on the History of Elisha* (Philadelphia: Herman Hooker, 1839), 52.

[11]W. T. Hamilton, "Borrow Not a Few," *The Preacher's Periodical* (April 1983): 14. [12]Adapted from Elaine J. Fletcher, "ಅದ್ಭುತಗಳ ಪ್ರವಾದಿ ಎಲೀಷ" (Washington, DC: Review and Herald Publishing Association, 1960), 34 ರಿಂದ ಮಾರ್ಪಡಿಸಿಕೊಳ್ಳಲಾಗಿದೆ. [13]Hamilton, 13. [14]Ibid., 14. [15]Mattew Henry, *Commentary on the Whole Bible,* ed. Leslie F. Church (Grand Rapids, Mich.: Zondervan Publishing House, 1961), 404. [16]Warren W. Wiersbe, *Be Distinct* (Colorado Springs, Colo.: Victor, 2002), 29. [17]Krummacher, 52.